

ದಾನ ಮಾಡಿದರೆ ನನಗೆ ಪುಣ್ಯ ಲಭಿಸಿತು ಎಂದು ಗೂಟ ಹಾಕಿದ ಕಡೆಗೆ ನಡೆದರು.

'ತೇಜಣ್ಣ, ಮನೆಗೆ ಬರುವುದಿಲ್ಲವಾ? ಅಲ್ಲಿಂದಲೇ ಹೋಗುವುದಾ ಹೇಗೆ?' ಜೋಪಡಿಯಿಂದ ಅಕ್ಕಯ್ಯ ಕರೆದಾಗ ತೇಜಣ್ಣ ತಮ್ಮ ಮಾಮೂಲು ಶೈಲಿಯಲ್ಲಿ ಮುಖ ಹಿಂದಕ್ಕೆ ತಿರುಗಿಸಿ ಒಂದು ಕಣ್ಣನ್ನು ಸಣ್ಣಗೆ ಮುಚ್ಚಿ, 'ಬರ್‍ತೇನೆ, ಒಮ್ಮೆ ಇಲ್ಲಿ ಆದದ್ದನ್ನು ನೋಡಿಕೊಂಡು ಬರ್‍ತೇನೆ' ಎಂದು ರಸ್ತೆಯ ಎರಡೂ ಕಡೆಗೂ ಅಗಲಕ್ಕೆ ಜಾಗ ಹೋಗುವುದನ್ನು ಕಂಡು ಹೊಟ್ಟೆ ಉರಿಸಿಕೊಂಡರು. ಸರಕಾರಕ್ಕೆ ಅಭಿವೃದ್ಧಿ ಕಾರ್ಯಕ್ಕೆ ಇಷ್ಟು ಜಾಗೆ ಬಿಟ್ಟುಕೊಟ್ಟರೆ ಪರಿಹಾರ ಸಿಗುವುದು ಅಷ್ಟರಲ್ಲಿಯೇ ಇದೆ. ಏನೇ ಆಗಲಿ ಇಷ್ಟು ಜಾಗ ಬಿಡುವುದೇ ಇಲ್ಲ. ಎಂದು ನಿರ್ಧಾರಕ್ಕೆ ಬಂದವರೇ ಅಕ್ಕಯ್ಯನ ಮನೆಯತ್ತ ನಡೆದರು. ಅಕ್ಕಯ್ಯ ಒಡಹುಟ್ಟಿದವಳಾದರೂ ಅವಳ ಬಗ್ಗೆ ತೇಜಣ್ಣನಿಗೆ ಒಳ್ಳೆಯ ಅಭಿಪ್ರಾಯವಿಲ್ಲ. ಹಾಗಾಗಿ ಊರಿಗೆ ಬಂದರೂ ಅವಳನ್ನು ಹೊರಗೆ ನಿಂತೇ ಮಾತಾಡಿಸಿ ಹೋಗುತ್ತಿದ್ದದ್ದು.

'ಏನು ಕುಡಿತೀ, ಬಿಸಿಲು ಜೋರಿದೆ ನೀರುಮಜ್ಜಿಗೆ ಮಾಡ್ಲಾ? ಅಥವಾ ನಿನ್ನೆ ಇವರು ಕೆಲಸಕ್ಕೆ ಹೋದವರು ಅಲ್ಲಿ ಉಳಿದ ಪಾನಕವನ್ನು ತಂದಿಟ್ಟಿದ್ದಾರೆ ಅದು ಆದೀತೆ?' ಸತ್ಕಾರದ ಮಾತುಗಳನ್ನು ಕೇಳಲು ತೇಜಣ್ಣ, 'ನಂಗೇನೂ ಬೇಡ. ಇಲ್ಲಿ ಈ ನಮೂನೆ ರಸ್ತೆ ಅಗಲ ಮಾಡುವುದಕ್ಕೆ ಗೂಟ ಹಾಕಿದ್ದಾರೆ. ನೀನು ಇಲ್ಲಿದ್ದು ಒಂದು ಮಾತು ಹೇಳಲಿಲ್ಲ. ನಂಗೆ ಊರಿನವರು ಫೋನ್ ಮಾಡಿ ಹೇಳಬೇಕಾದ ಸ್ಥಿತಿ ಬಂದಿದೆ'.

'ನಾನೇ ಫೋನ್ ಮಾಡುವುದರಲ್ಲಿದ್ದೆ. ಅಷ್ಟರೊಳಗೆ ನೀನು ಬಂದಾಯಿತಲ್ಲ. ನಮ್ಮ ಹಿರಿಯರ ಮನೆಯಲ್ವಾ. ಈ ಜಾಗವನ್ನು ಉಳಿಸಿಕೊಳ್ಳಲಾಗದಿದ್ದರೆ ಮುಂದೆ ಕಷ್ಟ ಉಂಟು'.

'ಅದಕ್ಕೆ ರಾಘವ ಫೋನ್ ಮಾಡಿದ ಕೂಡಲೇ ಓಡಿಬಂದದ್ದು. ಇನ್ನು ಮುಂದಿನ ವಾರ ಆಫೀಸಿನ ಕೆಲಸದ ಮೇಲೆ ನಾನು ಲಂಡನ್‌ಗೆ ಹೋಗುವುದಿದೆ. ಇನ್ನು ಮೂರು ತಿಂಗಳು ಬರುವುದಕ್ಕೆ ಆಗುವುದಿಲ್ಲ. ಇನ್ನೆರಡು ದಿವಸದಲ್ಲಿ ಇದನ್ನು ಇತ್ಯರ್ಥ ಮಾಡಿ ಹೋಗದಿದ್ದರೆ ಜಾಗೆಯೆಲ್ಲಾ ರಸ್ತೆ ಪ್ರಾಧಿಕಾರಕ್ಕೆ ಹೋಗ್ತದೆ. ನೋಡುವ ಯಾರೋ ಹರಿರಾಮನಂತೆ ಅವನನ್ನು ಮಾತಾಡಿಸಿಕೊಂಡು ಬರುವಾಂತ ರಾಘವ ಹೇಳಿದ್ದಾನೆ. ಹೋಗಿ ಬರ್‍ತೇನೆ' ಅನ್ನುವಷ್ಟರಲ್ಲಿ ಕಾರಿನ ಸದ್ದು ಕೇಳಿತು. ಅಕ್ಕಯ್ಯ ಮೆಲ್ಲಗೆ ತೇಜಣ್ಣನನ್ನು ಕರೆದು, 'ನೋಡು, ಅವ ರಾಘವ ಜನ ಸರಿಯಿಲ್ಲ ಮಾರಾಯಾ. ನಾನು ಬ್ಯಾಂಕ್‌ನಿಂದ ನಲವತ್ತು ಸಾವಿರ ದುಡ್ಡು ಡ್ರಾ ಮಾಡಿಕೊಂಡು ಅವನ ಅಂಗಡಿಗೆ ಹೋಗಿದ್ದೆ. ಆ ದುಡ್ಡನ್ನು ಅಲ್ಲಿಯೇ ಮೇಜಿನ ಮೇಲಿಟ್ಟು ಮಾತಾಡ್ತಿದ್ದೆ. ಅದನ್ನೇ ಎಗರಿಸಿದ್ದಾನೆ ಅವನು. ಕೇಳಿದ್ರೆ ಇಲ್ಲಾಂತಲೇ ಸಾಧಿಸ್ತಿದ್ದಾನೆ. ಅವನ ಜೊತೆಗೆ ವ್ಯವಹಾರ ಎಷ್ಟು ಬೇಕೋ ಅಷ್ಟೇ ಇರಲಿ' ಎನ್ನುವ ಎಚ್ಚರಿಕೆಯನ್ನು ಕೊಡಲು ಮರೆಯಲಿಲ್ಲ. ತೇಜಣ್ಣ ಅವಳ ಮಾತನ್ನು ಕಿವಿಗೆ ಹಾಕಿಕೊಳ್ಳದಂತೆ ರಾಘವನ ಕಾರು ಬಂದಾಗ ಅದನ್ನು ಏರಿದರು.

ರಾಘವ ತೇಜಣ್ಣನನ್ನು ತನ್ನ ಬಾಡಿಗೆ ಮನೆಗೆ ಕರೆದುಕೊಂಡು ಬಂದವನೇ ಹರಿರಾಮನಿಗೆ ಫೋನಾಯಿಸಿದ. ಐದು ನಿಮಿಷದಲ್ಲಿಯೇ ಹರಿರಾಮ ಮನೆಗೆ ಬಂದ. ರಾಘವ ತೇಜಣ್ಣನನ್ನು ಅವನಿಗೆ ಪರಿಚಯಿಸಿದ.

'ಈಗ ರಸ್ತೆ ಅಗಲೀಕರಣಕ್ಕೆ ಇಷ್ಟು ಜಾಗ ಹೋಗ್ತದಲ್ಲಾ? ಅದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವೇ?' ಹರಿರಾಮನಿಗೆ ಎದುರಿಗೆ ಕುಳಿತ ತೇಜಣ್ಣನ ಪ್ರಶ್ನೆ ಬಾಲಿಶವಾದುದ್ದೆನಿಸಿತು.

'ಹೇಗೆ ಸಾಧ್ಯ? ನಿಲ್ಲಿಸಲಿಕ್ಕೆ ಸಾಧ್ಯವೇ ಇಲ್ಲ. ಅದು ಸರಕಾರದ ನಿರ್ಧಾರವಲ್ಲವೇ?'

'ಆದ್ರೂ ಯಾರನ್ನಾದರೂ ಹಿಡಿದು...'

'ಅಂದ್ರೆ?'

'ಯಾರನ್ನಾದರೂ ಯಾಕೆ ಹಿಡಿಯುವುದು, ನಮ್ಮ ಹರಿರಾಮಣ್ಣನೇ ಇರುವಾಗ. ಅದಕ್ಕೆ ಬೇಕಾದ ಕ್ರಮ ತೆಗೆದುಕೊಂಡರೆ ಆಗುವುದಿಲ್ಲವೇ?'

ಹರಿರಾಮ ನಿರಾಕರಣೆಯಲ್ಲಿ ತಲೆಯಲುಗಿಸಿದ.

'ಹೇಗೆ ಸಾಧ್ಯ? ನೀವು ಕೋರ್ಟ್‌ಗೆ ಹಾಕಬೇಕಷ್ಟೆ. ಕೇಸ್ ಹಾಕಿದರೂ ಒಂದು ಮೂರು ನಾಲ್ಕು ವರ್ಷ ಸ್ಟೇ ತಂದು ನಿಲ್ಲಿಸಬಹುದು. ಸರಕಾರದ ಕೆಲಸಕ್ಕೆ ಅಡ್ಡಿಯಾಗುವುದು ಯಾಕೆ? ಇವತ್ತಲ್ಲ ನಾಳೆ ನೀವು ಅಷ್ಟು ಜಾಗವನ್ನು ಕಳೆದುಕೊಳ್ಳಲೇಬೇಕು'.

ತೇಜಣ್ಣನಿಗೆ ಬಂದ ಕೆಲಸ ಕೆಟ್ಟಿತೆನಿಸಿತು. ಹೀಗಾದರೆ ಎಂತ ಮಾಡುವುದೆನ್ನುವಂತೆ ರಾಘವನನ್ನು ನೋಡಿದರು. ಅವನು ಅರ್ಥೈಸಿಕೊಂಡವನಂತೆ ಹರಿರಾಮನಿಗೆ, 'ಈಗ ಎಂತ ಮಾಡುವುದು. ಇವರು ಎಲ್ಲಾ ಕೆಲಸ ಬಿಟ್ಟು ಓಡಿ ಬಂದಿದ್ದಾರೆ. ಎಂತಾದರೂ ಮಾಡ್ಲಿಕ್ಕೆ ಆಗುವುದಿಲ್ವಾ?' ಹರಿರಾಮ ಆಲೋಚನೆಗೊಳಗಾದ. ಸ್ವಲ್ಪ ಹೊತ್ತು ಮೌನ ಹೆಡೆಯಾಡಿತು.

'ಹರಿರಾಮಣ್ಣ ಮನಸ್ಸು ಮಾಡಿದ್ರೆ ಎಂತದ್ದೂ ಆಗದ್ದುಂಟ? ಹರಿರಾಮಣ್ಣ, ಸ್ವಲ್ಪ ಏನಾದ್ರೂ ಮಾಡಿ' ಸರಳಾಳ ಸುಮಧುರ ಸ್ವರ ಕೇಳಿದ್ದೇ, ಆತ ದಬಕ್ಕನೆ ಎದ್ದು ನಿಂತು, 'ಆಯ್ತು ಏನಾದ್ರೂ ಮಾಡುವ ಅಕ್ಕಾ. ಈಗ ನಮಗೆ ಏನಾದರೂ ಕುಡಿಯಲಿಕ್ಕೆ ಕೊಡ್ತೀರಾ?' ಎಂದು ನಗುತ್ತಲೇ ಮಾತಾಡಿದಾಗ ತೇಜಣ್ಣನಿಗೆ ಸರಿಕಾಣದಿದ್ದರೂ ರಾಘವ, 'ನೀವು ಇಲ್ಲಿಗೆ ಬರ್‍ತೀರೀಂತ ಗೊತ್ತಾದಾಗಲೇ ಚಾ ಮಾಡ್ಲಿಕ್ಕೆ ನೀರಿಟ್ಟಿದ್ದಾಳೆ. ಈಗ ಇವರ ಸಮಸ್ಯೆಯನ್ನು ಸರಿಮಾಡ್ಬೇಕಲ್ಲಾ?'

'ಆಯ್ತು, ಯಾವುದಕ್ಕೂ ಚಾ ಕುಡಿದು ಒಮ್ಮೆ ಅಲ್ಲಿಗೆ ಹೋಗಿ ಬರುವ. ಇವರ ಜಾಗೆ ಎಷ್ಟು ಹೋಗಿದೇಂತ ನೋಡದೆ ನಾನು ಏನು ಹೇಳುವುದು' ಎಂದು ಸಮಾಧಾನದಿಂದ ಮಾತಾಡಿದಾಗ ತೇಜಣ್ಣನಿಗೂ ಆತಂಕ ಕಡಿಮೆಯಾದಂತಾಯಿತು. ಅವರು ರಾಘವನನ್ನು ಹೊರಗೆ ಕರೆದುಕೊಂಡು ಬಂದು, 'ನೋಡು, ಎಷ್ಟು ಕಷ್ಟವಾದರೂ ಸರಿಯೇ ಗದ್ದೆಗಳು ಹಾಳಾಗಬಾರದು ಆಯ್ತಾ?' ಎಂದು ಪಿಸುಮಾತಿನಲ್ಲಿ ಹೇಳಿದರು.

'ಇವರು ಯಾರಿಗೂ ಆಯ್ತೂಂತ ಹೇಳಿದವರಲ್ಲ. ನಿಮಗೆ ಹೇಳಿದ ಮೇಲೆ ಮುಗಿಯಿತು. ಮಾಡದೆ ಇರುವುದಿಲ್ಲ' ಎಂದು ಸಮಾಧಾನ ಮಾಡಿದ.

'ಬನ್ನಿ, ಚಾ ಕುಡಿಯಿರಿ'. ಸರಳಾ ಎಲ್ಲರಿಗೂ ಚಹಾದ ಜೊತೆಗೆ ಹಲಸಿನ ಸೋಳೆಯ ಉಂಡ್ಲುಕವನ್ನು ಪ್ಲೇಟಿನಲ್ಲಿ ತಂದಿಟ್ಟು ಕರೆದಳು. ಚಹಾ ಕುಡಿಯುವ ಶಾಸ್ತ್ರ ಮುಗಿಯಿತು. ರಾಘವನ ಕಾರಿನಲ್ಲಿಯೇ ಎಲ್ಲರೂ ಹೊರಟಾಗ ಸರಳಾ ಕಾರಿನವರೆಗೂ ಬಂದು, 'ತೇಜಣ್ಣ, ಊಟಕ್ಕೆ ಇಲ್ಲಿಗೆ ಬನ್ನಿ. ಅಡುಗೆ ರೆಡಿಯಾಗಿದೆ' ಎಂದು ಕರೆಯಲು ಮರೆಯಲಿಲ್ಲ. ಏನಾದರಾಗಲಿ ತನ್ನ ಗಂಡ ಜಾಗದ ವಿಷಯವನ್ನು ಕೇಳಲು ಸಂಕೋಚಪಟ್ಟರೆ ತಾನೇ ಅವರನ್ನು ಕೇಳಬೇಕೆನ್ನುವ ಉದ್ದೇಶವೂ ಅವಳಿಗಿದೆ. ಅದಕ್ಕಾಗಿಯೇ ಅವರನ್ನು ಊಟಕ್ಕೆ ಆಹ್ವಾನಿಸಿದಳು.

ಕಾರು ಮುಂದಕ್ಕೆ ಹೋಯಿತು. ಕಾರು ಹಿರಿಯರ ಮನೆಯ ಹತ್ತಿರ ಬರುವಾಗ ಕಾರು ನಿಲ್ಲಿಸಿದ ರಾಘವ ಇಳಿದು ಬಾಗಿಲು ತೆರೆದ. ತೇಜಣ್ಣ ಮತ್ತು ಹರಿರಾಮ ಇಬ್ಬರೂ ಕೆಳಗೆ ಇಳಿದು ಗೂಟ ಹಾಕಿದ ಗದ್ದೆಯ ಬಳಿ ನಡೆದರು.

'ನೋಡಿ, ಬಲಗಡೆಯಿಂದ ಗೂಟ ಹಾಕಿದರೆ ಮನೆಯ ಹತ್ತಿರದಲ್ಲಿಯೇ ರಸ್ತೆ ಹೋಗುತ್ತದೆ. ಗದ್ದೆ ತುಂಬಾ ಫಸಲು ಬರುವಂತದ್ದು. ಮನೆ ಮತ್ತು ಗದ್ದೆ ಎರಡನ್ನೂ ಉಳಿಸಿಕೊಳ್ಳಬೇಕು', ಸಮಸ್ಯೆಯನ್ನು ಮುಂದಿಟ್ಟಾಗ ಹರಿರಾಮ ಗದ್ದೆಯವರೆಗೂ ನಡೆದು ಮನೆಯತ್ತ ನೋಡಿ, 'ಈ ಮನೆ ಹಳೆಯ ಕಾಲದ್ದಲ್ಲವೇ? ಇವತ್ತೋ ನಾಳೆಯೋ ಅನ್ನುವ ಹಾಗೆ ಇದೆ. ನಿಮಗೆ ಹೆಚ್ಚು ಪರಿಹಾರ ಸಿಗುವ ಹಾಗೆ ಮಾಡುವ' ಎಂದು ಇತ್ಯರ್ಥಕ್ಕೆ ಬಂದಂತೆ ಹೇಳಿದಾಗ ತೇಜಣ್ಣ ಒಪ್ಪಿಗೆಯಿಲ್ಲದವರಂತೆ ರಾಘವನ ಮುಖವನ್ನು ನೋಡಿದರು.

'ಈಗ ಈ ಹಿರಿಯರ ಮನೆಯನ್ನು ಉಳಿಸಿಕೊಳ್ಳುವುದಕ್ಕಾಗಿಯೇ ಇವರು ಲಂಡನ್ನಿಗೆ ಹೋಗಬೇಕಾಗಿದ್ದವರು ಕೆಲಸವನ್ನು ಬಿಟ್ಟು ನಿಂತ ಮೆಟ್ಟಿಗೆ ಓಡಿಬಂದಿದ್ದಾರೆ. ನೀವು ಹೇಗಾದರೂ ಮಾಡಿ ಈ ಮನೆಯನ್ನು ಈ ಗದ್ದೆಯನ್ನೂ ಉಳಿಸಿಕೊಡಬೇಕು'. ರಾಘವನ ಅಹವಾಲು ಸ್ವೀಕರಿಸಿದವನೇ ಪಿಡಬ್ಲ್ಯುಡಿಯ ಎಂಜಿನಿಯರರನ್ನು ಭೇಟಿ ಮಾಡಲು ಕಾರ್ಯನಿರತರಾಗಿದ್ದ ಅವರ ಹತ್ತಿರ ನಡೆದ. ಎಂಜಿನಿಯರ್ ಬಾಬಣ್ಣ ಅವನ ಪರಿಚಯದವರೇ ಆಗಿದ್ದರಿಂದ ಕೆಲಸ ಸುಸೂತ್ರವಾಗಿ ನಡೆಯಬಹುದೆನಿಸಿತು. ಅವರು ಆಲೋಚಿಸುತ್ತಿದ್ದಂತೆ ರಸ್ತೆ ಅಗಲೀಕರಣದ ಯಂತ್ರಗಳೆಲ್ಲವೂ ಅವರ ಹಿರಿಯರ ಮನೆಯ ಹತ್ತಿರ ಬಂದು ನಿಂತವು. ಇದ್ದವರೆಲ್ಲಾ ಅವರವರ ಆಲೋಚನೆಯಲ್ಲಿಯೇ ಮುಳುಗಿ ಹೋದರು.

ಪ್ರತಿಕ್ರಿಯಿಸಿ: feedback@sudha.co.in